ವಿನಂತಿ, ಹೀಗೆ ಸಾಲು ಸಾಲು ಪೋಸ್ಟರ್‌ಗಳಿಗೆ ಲೈಕ್, ಕಾಮೆಂಟ್ ಮಾಡುತ್ತ ಮುಂದೆ ಹೋಗುತ್ತಿದ್ದ. ಒಮ್ಮೆಲೆ ರೂಮಿನೊಳಗೆ ಬೆಕ್ಕು ಮಿಯ್ಯಾಂ ಅಂತ ಕಿರಿಚಿದಂಗಾಯಿತು. ದಿಗ್ಗನೆ ಎದ್ದು ಕುಳಿತ. ಮತ್ತೆ ಮಿಯ್ಯಾಂ ಅಂತ ಕೇಳಿದಂತಾಗಿ ಉಸ್ಸ್ ಉಸ್ಸ್ ಅಂತ ಓಡಿಸತೊಡಗಿದ. ಎದ್ದು ನಿಂತು ಸುತ್ತಲೂ ನೋಡಿದ. ಯಾವ ಬೆಕ್ಕೂ ಕಾಣಲಿಲ್ಲ. ಯಾಕೆ ಈ ಬೆಕ್ಕು ಬೆಳಿಗ್ಗೆಯಿಂದ ಪದೇ ಪದೇ ಕಾಡ್ತಿದೆ ಅಂತ ಭಯವಾಯಿತು. ಚಕ್ ಚಕ್ ಅಂತ ಗಡಿಯಾರದ ಮುಳ್ಳಿನ ಸದ್ದಿಗೆ ಗೋಡೆ ದಿಟ್ಟಿಸಿದ. ಹನ್ನೊಂದು ಗಂಟೆ ದಾಟಿತ್ತು. ಗಡಿಯಾರದ ಪಕ್ಕದಲ್ಲೇ ಬೆಕ್ಕಿನ ಚಿತ್ರವಿರುವ ಫೋಟೊ ಕಂಡ. ದಿಟ್ಟಿಸಿ ಕಣ್ಣಲ್ಲಿ ಕಣ್ಣಿಟ್ಟು ಇವನನ್ನೇ ನೋಡುವಂತೆ ಭಾಸವಾಗಿ ಹೆದರಿಕೆಯಾಗಿ, ಗಂಟಲು ಒಣಗಿದಂತಾಗಿ ನೀರಿನ ಬಾಟಲಿನಿಂದ ಗ್ಲಾಸಿಗೆ ಬಗ್ಗಿಸಿಕೊಂಡು ಒಂದೆರಡು ಗುಟುಕು ಕುಡಿದ. ಮತ್ತೆ ಮಿಯ್ಯಾಂ ಅಂತ ಬೆಕ್ಕಿನ ಧ್ವನಿ ಕೇಳಿಸಿದಾಗ ಬೆಚ್ಚಿಬಿದ್ದು ಕೈಯಲ್ಲಿನ ನೀರಿನ ಗ್ಲಾಸ್ ಟಳ್ಳನೆ ಕೆಳಗೆ ಬಿತ್ತು. ಗಾದಿ ಏರಿ ಕುಕ್ಕರುಗಾಲಲ್ಲಿ ಹಾಗೆ ಸ್ವಲ್ಪ ಹೊತ್ತು ಕುಳಿತ. ನಂತರ ತಲೆದಿಂಬನ್ನು ತೊಡೆಯ ಸಂದಿಯಲ್ಲಿ ಇಟ್ಟುಕೊಂಡು ಎರಡು ಮೊಣಕಾಲು ಎದೆಹತ್ತಿರ ತಂದು ಗೋಡೆ ದಿಟ್ಟಿಸುತ್ತ ಮಲಗಿಕೊಂಡು, ಮತ್ತೆ ನೆನಪಿಗೆ ಜಾರಿದ.

ಪರೀಕ್ಷೆಗಳು ಮುಗಿದ ಮೇಲೆ ಹಾಸ್ಟೆಲಿನಲ್ಲಿ ತನ್ನ ಗೆಳೆಯರ ಜೊತೆ ಪಾರ್ಟಿ ಮಾಡಿ ಅಂದು ಲೇಟಾಗಿ ರಾಮಚಂದ್ರ ಊರಿಗೆ ಬಂದು, ಮನೆ ಬಾಗಿಲು ತಟ್ಟಿದಾಗ ಚಂದ್ರವತಿ ಬೇಗ ಬಾಗಿಲು ತೆರೆಯಲಿಲ್ಲ. ಬಾಗಿಲ ಒಳಗೆ ಕಾಲಿಟ್ಟವನೆ ತನ್ನ ಕೈಯಲ್ಲಿನ ಬ್ಯಾಗನ್ನು ಬಿಸಾಕಿ ಬಚ್ಚಲಲ್ಲಿ ಮುಖ ತೊಳೆಯುವುದಕ್ಕೆ ಹೋದಾಗ, ತನ್ನ ತಲೆಯ ಮೇಲಿಂದ ಬೆಕ್ಕು ಚೆಂಗನೆ ಎಗರಿಹೋಯಿತು. ಬೆಚ್ಚಿ ಬಿದ್ದು ಹಿಂದಕ್ಕೆ ತಿರುಗಿ ನೋಡಿದಾಗ ಯಾರೋ ಒಬ್ಬ ಮೆಲ್ಲನೆ ಒಳಮನೆಯಿಂದ ನುಸುಳುವ ದೃಶ್ಯಕ್ಕೆ ಆಶ್ಚರ್ಯವಾಗಿ, ‘ಯಾರದು?’ ಅಂತ ಕಿರುಚಿದ. ಚಂದ್ರವತಿ ಬಂದವಳೇ ‘ಯಾರಿಲ್ಲ, ನೀ ಮುಖ ತೊಳಿ’ ಅಂದರೂ ಕೈಯಲ್ಲಿನ ತಂಬಿಗೆ ಬಿಸಾಕಿ ಹೋದ. ಅಷ್ಟರಲ್ಲಿ ಅವನು ಹೊಸಿಲು ದಾಟಿ ಹೊರಟಿದ್ದ. ರಾಮಚಂದ್ರನಿಗೆ ಅರ್ಥವಾಯಿತು, ಅವನು ಬೇರಾರೂ ಅಲ್ಲ, ಚಂದ್ರವತಿಯ ಗೆಳೆಯ ಅಂತ. ಸುಮಾರು ವರ್ಷಗಳ ಹಿಂದೆ ನಡೆದ ಘಟನೆ ಅವನಿಗೆ ತಟ್ಟನೆ ನೆನಪಿಗೆ ಬಂತು. ಚಂದ್ರವತಿ ಮತ್ತು ರಾಮಚಂದ್ರನ ಅಪ್ಪ ಲಿಂಗೇಶನ ಸಂಬಂಧ ಹಳಸಿತ್ತು. ಲಿಂಗೇಶನಿಗೆ ಈಗಾಗಲೇ ಮದುವೆಯಾಗಿ ಇಬ್ಬರು

